# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003**

*********************************************************************

## Frequently Asked Questions Regarding Mar/Apr 2020 SSLC Exam

*********************************************************************

**1. 2020ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ಪ್ರವೇಶ ಪತ್ರಗಳನ್ನು ಹೇಗೆ ಪಡೆಯಬೇಕು? ಮತ್ತು ಒಂದು ವೇಳೆ ಕಳೆದು ಹೋದಲ್ಲಿ ಮತ್ತೆ ಪ್ರವೇಶ ಪತ್ರವನ್ನು ಹೇಗೆ ಪಡೆಯುವುದು?**

2020ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ಪ್ರವೇಶ ಪತ್ರಗಳನ್ನು ಮಂಡಳಿಯ ಜಾಲತಾಣ www.kseeb.kar.nic.in ನ ಶಾಲಾ ಲಾಗಿನ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಒಂದು ವೇಳೆ ಕಳೆದು ಹೋದಲ್ಲಿ ಪ್ರವೇಶ ಪತ್ರವನ್ನು ಎಷ್ಟು ಬಾರಿಯಾದರೂ ಡೌನ್‌ಲೋಡ್ ಮಾಡಿಕೊಳ್ಳಬಹುದು.

**2. 2020ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸ್ವರೂಪದಲ್ಲಿ ಬದಲಾವಣೆಯಾಗಿದೆಯೇ?**

ಹೌದು. ಪ್ರಸ್ತುತ ಮಾರ್ಚ್/ಏಪ್ರಿಲ್ 2020ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸ್ವರೂಪದಲ್ಲಿ ಬದಲಾವಣೆ ಮಾಡಲಾಗಿದೆ. ಬಹು ಆಯ್ಕೆ ಹಾಗೂ ಕಿರು ಉತ್ತರದ ಪ್ರಶ್ನೆ ಸಂಖ್ಯೆಗಳನ್ನು ಕಡಿಮೆ ಮಾಡಿ, ವಿವರಣಾತ್ಮಕ ಉತ್ತರ ಬರೆಯುವ ಪ್ರಶ್ನೆಗಳಿಗೆ ಆದ್ಯತೆ ನೀಡಲಾಗಿದೆ. ಈ ಬಗ್ಗೆ ಮಂಡಳಿಯು 'ದೀವಿಗೆ' ಹೆಸರಿನಲ್ಲಿ ಪ್ರಕಟಿಸಿರುವ ಪುಸ್ತಕದಲ್ಲಿ ವಿವರಗಳನ್ನು ಪಡೆಯಬಹುದಾಗಿದೆ. ಈ ಪುಸ್ತಕಗಳನ್ನು ಮಂಡಳಿಯು ಪ್ರತಿ ಶಾಲೆಗೂ ಈಗಾಗಲೇ ಸರಬರಾಜು ಮಾಡಿದೆ.

**3. 2020ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ವಿಷಯವಾರು ನೀಲನಕಾಶೆ ನೀಡಲಾಗುವುದೇ?ಹಾಗೂ ಪ್ರತಿ ವಿಷಯದಲ್ಲೂ ಅಧ್ಯಾಯವಾರು ಅಂಕಗಳನ್ನು ಹಂಚಿಕೆ ಮಾಡಲಾಗಿದೆಯೇ? ಅದರಂತೆ ಪರೀಕ್ಷೆಯಲ್ಲಿ ಪ್ರಶ್ನೆಗಳನ್ನು ಕೇಳಲಾಗುತ್ತದೆಯೇ?**

ಇಲ್ಲಾ. 2018-19ನೇ ಸಾಲಿನಿಂದ ನೀಲನಕಾಶೆ ನೀಡುತ್ತಿಲ್ಲ. ಬದಲಾಗಿ ಪಠ್ಯಪುಸ್ತಕದಲ್ಲಿನ ಘಟಕಗಳ ಮುಖ್ಯಾಂಶಗಳ ಆಧಾರಿತ/ವಿಷಯಾಧಾರಿತ (Theme based)ವಾಗಿ ಅಂಕಗಳನ್ನು ಹಂಚಿಕೆ ಮಾಡಿ, ಇದರ ಆಧಾರದ ಮೇಲೆ ಪ್ರಶ್ನೆಪತ್ರಿಕೆಯನ್ನು ರಚಿಸಲಾಗುತ್ತದೆ. ವಿದ್ಯಾರ್ಥಿಗಳು ಪ್ರತಿ ವಿಷಯದಲ್ಲಿ ನೀಡಿರುವ ಎಲ್ಲಾ ಅಧ್ಯಾಯಗಳನ್ನು ಕೂಲಂಕುಷವಾಗಿ ಅಧ್ಯಯನ ಮಾಡಿ ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳಬೇಕು. ಈ ಬಗ್ಗೆ ಅಂದರೆ Themewise Weightage, Question Paper Pattern, Marks allotted to type of questions ಈ ಎಲ್ಲಾ ವಿವರಗಳು ಮಂಡಳಿಯ ಜಾಲತಾಣದಲ್ಲಿ ಲಭ್ಯವಿದೆ. ಹಾಗೂ 'ದೀವಿಗೆ' ಪುಸ್ತಕದಲ್ಲೂ ಈ ಮಾಹಿತಿ ಪಡೆಯಬಹುದು.

**4. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಾಠದ ಮಧ್ಯ ಭಾಗದಿಂದ ಪ್ರಶ್ನೆಗಳನ್ನು ಕೇಳಲಾಗುತ್ತದೆಯೇ?**

ವಿಷಯದ ಎಲ್ಲಾ ಅಧ್ಯಾಯದ ಯಾವುದೇ ಪರಿಕಲ್ಪನೆಯ ಮೇಲೆ ಪ್ರಶ್ನೆಗಳನ್ನು ಕೇಳಬಹುದಾಗಿದ್ದು, ವಿದ್ಯಾರ್ಥಿಗಳು ಎಲ್ಲಾ ಅಧ್ಯಾಯಗಳನ್ನು ವ್ಯಾಪಕವಾಗಿ ಮತ್ತು ಸಮಗ್ರವಾಗಿ ಅಧ್ಯಯನ ಮಾಡಬೇಕು. ಇದರಿಂದ ಪರೀಕ್ಷೆಯಲ್ಲಿ ಯಾವುದೇ ಪ್ರಶ್ನೆಗಳನ್ನು ಕೇಳಿದರೂ ಆತ್ಮವಿಶ್ವಾಸದಿಂದ ಉತ್ತರವನ್ನು ಬರೆಯಬಹುದಾಗಿದೆ. ಅಧ್ಯಾಯಗಳಲ್ಲಿ ಕೆಲವು ಪರಿಕಲ್ಪನೆ/ಅಂಶಗಳು ಮುಖ್ಯ ಅಥವಾ ಅಮುಖ್ಯ ಎಂಬುದಿಲ್ಲ.

**5. 2020ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ಮಾದರಿ ಪ್ರಶ್ನೆಪತ್ರಿಕೆಗಳು ಎಲ್ಲಿ ದೊರೆಯುತ್ತವೆ?**

2020ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ಮಾದರಿ ಪ್ರಶ್ನೆಪತ್ರಿಕೆಗಳು ಮಂಡಳಿಯ ಜಾಲತಾಣ www.kseeb.kar.nic.in ನಲ್ಲಿ ದೊರೆಯುತ್ತವೆ.

**6. 2020ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ಸಮಯದಲ್ಲಿ ಬದಲಾವಣೆಯಾಗಿದೆಯೇ?**

ಹೌದು. ಪ್ರಥಮ ಭಾಷೆ ಮತ್ತು ಕೋರ್ ವಿಷಯಗಳಿಗೆ 15 ನಿಮಿಷಗಳ ಹೆಚ್ಚುವರಿ ಸಮಯವನ್ನು ಹಾಗೂ ದ್ವಿತೀಯ ಮತ್ತು ತೃತೀಯ ಭಾಷೆಗಳಿಗೆ 30 ನಿಮಿಷಗಳ ಹೆಚ್ಚುವರಿ ಸಮಯವನ್ನು ನೀಡಲಾಗಿದೆ.

**7. ಪರೀಕ್ಷಾ ಕೇಂದ್ರದಲ್ಲಿ ಎಷ್ಟು ಸಮಯದ ಮೊದಲು ಹಾಜರಿರಬೇಕು?**

ಪರೀಕ್ಷಾ ಸಮಯದ ಅರ್ಧ ಗಂಟೆ ಮೊದಲು ಪರೀಕ್ಷಾ ಕೇಂದ್ರದಲ್ಲಿ ಹಾಜರಿರಬೇಕು.

**8. ಪರೀಕ್ಷಾ ಕೊಠಡಿಗೆ ಕೈಗಡಿಯಾರ ಧರಿಸಿ ಬರಬಹುದೇ?**

ಅನಲಾಗ್ ಕೈ ಗಡಿಯಾರವನ್ನು ಧರಿಸಿ ಬರಬಹುದಾಗಿದ್ದು, ಡಿಜಿಟಲ್ ಮತ್ತು ಸ್ಮಾರ್ಟ್ ಕೈ ಗಡಿಯಾರಗಳನ್ನು ಪರೀಕ್ಷಾ ಕೇಂದ್ರಕ್ಕೆ ಧರಿಸಿ ಬರುವುದನ್ನು ನಿಷೇದಿಸಿದೆ.

**9. ಪರೀಕ್ಷಾ ಸಮಯದ ಮುಕ್ತಾಯದ ಮುನ್ನ ಪರೀಕ್ಷಾ ಕೊಠಡಿಯಿಂದ ಹೊರಹೋಗಬಹುದೇ? ಒಮ್ಮೆ ಹೊರ ಹೋಗಿ ನಂತರ ಬಂದು ಪರೀಕ್ಷೆ ಬರೆಯಲು ಅವಕಾಶವಿದೆಯೇ?**

ಪರೀಕ್ಷೆ ಪ್ರಾರಂಭವಾಗಿ ಅರ್ಧ ಗಂಟೆಯವರೆಗೂ ಪರೀಕ್ಷಾ ಕೊಠಡಿಯಿಂದ ಹೊರ ಹೋಗಲು ಅವಕಾಶವಿರುವುದಿಲ್ಲ. ಅರ್ಧ ಗಂಟೆಯ ನಂತರ ಹೊರ ಹೋಗಬಹುದಾಗಿದ್ದು, ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆ ಎರಡನ್ನೂ ಪರೀಕ್ಷಾ ಕೊಠಡಿಯ ಮೇಲ್ವಿಚಾರಕರಿಗೆ ಒಪ್ಪಿಸುವುದು. ಆದರೆ ಒಮ್ಮೆ ಹೊರ ಹೋದ ನಂತರ ಮತ್ತೆ ಪರೀಕ್ಷಾ ಕೊಠಡಿಗೆ ಪ್ರವೇಶವನ್ನು ನಿರಾಕರಿಸಲಾಗಿದೆ.

**10. ಪರೀಕ್ಷಾ ಕೊಠಡಿಯಲ್ಲಿ ವಿದ್ಯಾರ್ಥಿಗಳು ಪಾಲಿಸಬೇಕಾದ ನಿಯಮಗಳು ಯಾವುವು?**

ವಿದ್ಯಾರ್ಥಿಗಳು ತಮಗೆ ನಿಗದಿಪಡಿಸಿರುವ ಸ್ಥಳದಲ್ಲಿಯೇ ಕುಳಿತುಕೊಂಡು ಪರೀಕ್ಷೆ ಬರೆಯುವುದು. ಯಾವುದೇ ಕಾರಣಕ್ಕೂ ಗೈರು ಹಾಜರಾದ ವಿದ್ಯಾರ್ಥಿಯ ಜಾಗದಲ್ಲಿ ಕುಳಿತು ಪರೀಕ್ಷೆ ಬರೆಯಬಾರದು. ಮತ್ತು ಪರೀಕ್ಷಾ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಪುಸ್ತಕ, ಚೀಟಿ,ಕಾಗದ, ಕೈ ಬರಹ, ವಿದ್ಯುನ್ಮಾನ ಉಪಕರಣಗಳನ್ನು ಹೊಂದಿರಬಾರದು.

**11. ಉತ್ತರ ಪತ್ರಿಕೆಯಲ್ಲಿ ವಿದ್ಯಾರ್ಥಿಗಳು ಬರೆಯಲೇಬೇಕಾದ ಅಗತ್ಯ ಮಾಹಿತಿಗಳು ಯಾವುವು? ಯಾವ ಮಾಹಿತಿಗಳನ್ನು ಬರೆಯಬಾರದು?**

ವಿದ್ಯಾರ್ಥಿಗಳು ಉತ್ತರ ಪತ್ರಿಕೆಯಲ್ಲಿ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ನೋಂದಣಿ ಸಂಖ್ಯೆ, ವಿಷಯ, ವಿಷಯದ ಸಂಕೇತ ಮತ್ತು ಮಾಧ್ಯಮ, ಹೆಚ್ಚುವರಿಯಾಗಿ ಬಳಕೆ ಮಾಡಿರುವ ಪುರವಣಿಗಳ ಕ್ರಮ ಸಂಖ್ಯೆಯನ್ನು ನಮೂದಿಸುವುದು. ಯಾವುದೇ ಕಾರಣಕ್ಕೂ ವಿದ್ಯಾರ್ಥಿಯ ಹೆಸರು, ಶಾಲಾ ಹೆಸರು, ವಿಳಾಸ ಮತ್ತು ವೈಯುಕ್ತಿಕ ವಿವರಗಳನ್ನು ಬರೆಯಬಾರದು.

**12. ವಿದ್ಯಾರ್ಥಿಗಳು ಹೆಚ್ಚುವರಿ ಉತ್ತರ ಪುರವಣಿಯನ್ನು ಪಡೆದಾಗ ಯಾವ ಹಂತಗಳನ್ನು ಅನುಸರಿಸಬೇಕು?**
ಹೆಚ್ಚುವರಿ ಉತ್ತರ ಪುರವಣಿಯ ಕ್ರಮ ಸಂಖ್ಯೆಯನ್ನು ಮುಖ್ಯ ಉತ್ತರ ಪತ್ರಿಕೆಯಲ್ಲಿ ಮತ್ತು ಫ಼ೋಫಾರ್ಮಾದಲ್ಲಿ ದಾಖಲಿಸುವುದು. ಮತ್ತು ಮುಖ್ಯ ಉತ್ತರ ಪತ್ರಿಕೆಯ ಕ್ರಮ ಸಂಖ್ಯೆಯನ್ನು ಹೆಚ್ಚುವರಿ ಉತ್ತರ ಪುರವಣಿಯಲ್ಲಿ ದಾಖಲಿಸುವುದು.

**13. ವಿದ್ಯಾರ್ಥಿಗಳು ಎಲ್ಲೆಲ್ಲಿ ಮತ್ತು ಯಾವಾಗ ಸಹಿ ಮಾಡಬೇಕು?**
ವಿದ್ಯಾರ್ಥಿಗಳು ಕೇಂದ್ರ ನಾಮಯಾದಿ ಪಟ್ಟಿ (CNR) ಮತ್ತು ಫ಼ೋಫಾರ್ಮಾದಲ್ಲಿ ಉತ್ತರ ಪತ್ರಿಕೆಯನ್ನು ಪಡೆದಿದ್ದಕ್ಕೆ ಪ್ರಾರಂಭದಲ್ಲಿ ಮತ್ತು ಹಿಂದಿರುಗಿಸಿದ್ದಕ್ಕೆ ಪರೀಕ್ಷಾ ಸಮಯದ ಅಂತ್ಯದಲ್ಲಿ ಸಹಿ ಮಾಡುವುದು.

**14. ಪರೀಕ್ಷೆಯಲ್ಲಿ ನೇರವಾಗಿ ಪ್ರಶ್ನೆಗಳನ್ನು ಕೇಳದೇ ಟ್ವಿಸ್ಟ್ ಮಾಡಿ ಕೇಳಲಾಗುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗುವುದಿಲ್ಲವೇ?**
ಖಂಡಿತಾ ಇಲ್ಲ. ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆಯನ್ನು ಬೋದನಾ ಉದ್ದಿಷ್ಟಗಳನ್ನು ಆಧರಿಸಿ ರಚಿಸಲಾಗುತ್ತದೆ. ಇದರಲ್ಲಿ ಜ್ಞಾನ, ತಿಳುವಳಿಕೆ, ಗ್ರಹಿಕೆ, ಅಭಿವ್ಯಕ್ತಿ, ಅನ್ವಯ, ಪ್ರಶಂಸೆ ಮತ್ತು ಕೌಶಲ್ಯ ಹೀಗೆ ವಿವಿಧ ಬೋದನಾ ಉದ್ದಿಷ್ಟಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪ್ರತಿ ವಿಷಯದಲ್ಲೂ ಕೇಳಲಾಗಿರುತ್ತದೆ. ಪ್ರಶ್ನೆಪತ್ರಿಕೆಯಲ್ಲಿ ಟ್ವಿಸ್ಟ್ ಮಾಡಿ ಕೇಳಲಾದ ಪ್ರಶ್ನೆಗಳು ಅನ್ವಯಕ್ಕೆ ಸಂಬಂಧಿಸಿದ ಪ್ರಶ್ನೆಗಳಾಗಿದ್ದು, ಮಕ್ಕಳ ತಾರ್ಕಿಕ ಚಿಂತನೆಯನ್ನು ಪರೀಕ್ಷಿಸುವುದಾಗಿದೆ.

**15. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಾಸಿಂಗ್ ಮಾರ್ಕ್ ಪ್ಯಾಕೆಜ್‌ಗೆ ವೇಟೇಜ್ ನೀಡಲಾಗುತ್ತದೆಯೇ?**
ಇಲ್ಲಾ. ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪಾಸಿಂಗ್ ಮಾರ್ಕ್ ಪ್ಯಾಕೆಜ್‌ಗೆ ವೆಟೇಜ್ ನೀಡಿದಲ್ಲಿ ಪರೀಕ್ಷೆಗೆ ಯಾವುದೇ ಅರ್ಥವಿರುವುದಿಲ್ಲ. ಹಾಗಾಗಿ ವಿಷಯಕ್ಕೆ ಸಂಬಂಧಿಸಿದ ಎಲ್ಲಾ ಅಧ್ಯಾಯಗಳನ್ನು ಓದಿ, ಅರ್ಥ ಮಾಡಿಕೊಂಡು ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳುವುದು.

**16. ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮವಾಗಿ ಬರೆಯಲು ಪಠ್ಯಪುಸ್ತಕಕ್ಕೆ ಒತ್ತು ಕೊಡಬೇಕೇ ಇಲ್ಲವೇ ಶಿಕ್ಷಕರು ನೀಡುವ ನೋಟ್ಸ್ ಅಥವಾ ಪಾಸಿಂಗ್ ಪ್ಯಾಕೆಜ್‌ಗೆ ಒತ್ತು ಕೊಡಬೇಕೇ?**
ಪಾಸಿಂಗ್ ಪ್ಯಾಕೆಜ್‌ಗೆ ಮಹತ್ವ ನೀಡುವುದಕ್ಕಿಂತ, ವಿದ್ಯಾರ್ಥಿಗಳು ಪ್ರತಿ ವಿಷಯಕ್ಕೂ ಸಂಬಂಧಿಸಿದ ಪಠ್ಯಪುಸ್ತಕಗಳನ್ನು ಅಧ್ಯಯನ ಮಾಡಿ ಪರಿಕಲ್ಪನೆಗಳನ್ನು ಅರ್ಥಮಾಡಿಕೊಂಡಿದ್ದಲ್ಲಿ ಪರೀಕ್ಷೆಯನ್ನು ಯಾವುದೇ ಭಯವಿಲ್ಲದೇ, ಆತ್ಮ ವಿಶ್ವಾಸದಿಂದ ಎದುರಿಸಬಹುದಾಗಿದೆ. ಶಿಕ್ಷಕರು ನೀಡುವ ನೋಟ್ಸ್ ಕೂಡ ವಿದ್ಯಾರ್ಥಿಗೆ ನೆರವಾಗಬಲ್ಲದು.

**17. ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯ ಪಶ್ನೆ ಪತ್ರಿಕೆಯ ಉತ್ತರ ಕೀಲಿಯಲ್ಲಿ ಇರುವಂತೆಯೇ ಉತ್ತರ ಬರೆಯದಿದ್ದರೆ ಅಂಕ ಸಿಗುವುದಿಲ್ಲವೇ?**
ಮಂಡಳಿಯು ಪರೀಕ್ಷೆ ಮುಗಿದ ನಂತರ ಪ್ರಕಟಿಸುವ ಉತ್ತರ ಕೀಲಿಯು ಗೈಡ್‌ಲೈನ್ ಮಾತ್ರ. ಉತ್ತರ ಕೀಲಿಯಲ್ಲಿರುವಂತೆಯೇ Word To Word ಉತ್ತರ ಇರಬೇಕೆಂದೇನೂ ಇಲ್ಲಾ. ಆದರೆ ಪ್ರಶ್ನೆಯು ನಿರೀಕ್ಷಿಸುವಂತಹ ಉತ್ತರವನ್ನು ಧ್ವನಿಸುವಂತಿದ್ದರೆ ಅಂಕಗಳನ್ನು ನೀಡಲಾಗುವುದು.

**18. ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಸ್ಪೆಲ್ಲಿಂಗ್ ತಪ್ಪಿದ್ದರೆ ಅಂಕ ನೀಡುತ್ತಾರೆಯೇ?**
ಸಣ್ಣ ಪುಟ್ಟ ತಪ್ಪುಗಳಿಗೆ ಆತಂಕಪಡುವ ಅಗತ್ಯವಿಲ್ಲ. ನೀವು ಬರೆಯುವಂತಹ ಉತ್ತರಗಳು ಮೌಲ್ಯಮಾಪಕರಿಗೆ ಅರ್ಥವಾಗುವಂತಿರಬೇಕು ಮತ್ತು ಅರ್ಥ ವ್ಯತ್ಯಾಸವಾಗುವಂತಿರಬಾರದು.

**19. ಎಸ್.ಎಸ್.ಎಲ್.ಸಿ ಪೂರ್ವ ಸಿದ್ದತಾ ಪರೀಕ್ಷೆಯನ್ನು ಶಾಲಾ ಅಥವಾ ಕ್ಲಸ್ಟರ್ ಹಂತದಲ್ಲಿ ನಡೆಸಲಾಗುತ್ತದೆಯೇ?**
ಎಸ್.ಎಸ್.ಎಲ್.ಸಿ ಮುಖ್ಯ ಪರೀಕ್ಷೆಯನ್ನು ವಿದ್ಯಾರ್ಥಿಗಳು ಧೈರ್ಯ ಮತ್ತು ಆತ್ಮ ವಿಶ್ವಾಸದಿಂದ ಎದುರಿಸುವ ನಿಟ್ಟಿನಲ್ಲಿ, ಈ ವರ್ಷದಿಂದ ಮಂಡಳಿಯ ವತಿಯಿಂದಲೇ ಪೂರ್ವ ಸಿದ್ಧತಾ ಪರೀಕ್ಷೆಯನ್ನು ನಡೆಸಲಾಗುತ್ತಿದೆ. ಸದರಿ ಪರೀಕ್ಷೆಗಳು ದಿನಾಂಕ 17.02.2020 ರಿಂದ 24.02.2020ರವರೆಗೆ ಶಾಲಾ ಹಂತದಲ್ಲಿಯೇ ನಡೆಸಲಾಗಿದ್ದು, ಮೌಲ್ಯಮಾಪನವು ಕೂಡ ಶಾಲಾ ಹಂತದಲ್ಲಿಯೇ ನಡೆಯುತ್ತದೆ.

**20. ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಯಾವುದೇ ಭಯ ಮತ್ತು ಆತಂಕವಿಲ್ಲದೇ ಎದುರಿಸುವುದು ಹೇಗೆ?**
ವಿದ್ಯಾರ್ಥಿಗಳು ಪ್ರತಿ ವಿಷಯದ ಎಲ್ಲಾ ಅಧ್ಯಾಯಗಳನ್ನು ಸಮಗ್ರ ಮತ್ತು ವ್ಯಾಪಕವಾಗಿ ಅಧ್ಯಯನ ಮಾಡುವುದು. ಮಂಡಳಿಯು ನೀಡಿರುವ ಮಾದರಿ ಪ್ರಶ್ನೆಪತ್ರಿಕೆ ಮತ್ತು ಪೂರ್ವ ಸಿದ್ಧತಾ ಪರೀಕ್ಷೆಯ ಪ್ರಶ್ನೆಪತ್ರಿಕೆಗಳನ್ನು ವಿಶ್ಲೇಷಿಸಿ ಅದರಂತೆ ಸಿದ್ದತೆಯನ್ನು ಮಾಡಿಕೊಂಡು ಅಧ್ಯಯನ ನಡೆಸಿದ್ದಲ್ಲಿ ಯಾವುದೇ ಭಯ, ಆತಂಕವಿಲ್ಲದೇ ಪರೀಕ್ಷೆಯನ್ನು ಆತ್ಮವಿಶ್ವಾಸದಿಂದ ಎದುರಿಸಬಹುದಾಗಿದೆ.

**21. ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯ ಮಧ್ಯೆ ಶೌಚಕ್ಕೆ ಹೋಗಲು ಅವಕಾಶವಿದೆಯೇ?**
ಇದೆ. ಅನಿವಾರ್ಯ ಮತ್ತು ವಿಶೇಷ ಸಂದರ್ಭಗಳಲ್ಲಿ ಶೌಚ ಗೃಹಕ್ಕೆ ಹೋಗಬೇಕಾದಲ್ಲಿ ಪರೀಕ್ಷಾ ಕೇಂದ್ರದಲ್ಲಿರುವ ಕೊಠಡಿ ಮೇಲ್ವಿಚಾರಕರು, ಮುಖ್ಯ ಅಧೀಕ್ಷಕರು ಪರೀಕ್ಷಾ ಅಕ್ರಮಕ್ಕೆ ಅವಕಾಶ ನೀಡದಂತೆ ಕ್ರಮವಹಿಸುತ್ತಾರೆ.

**22. ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳ (CWSN) ಉತ್ತರ ಪತ್ರಿಕೆಗಳನ್ನು ಹೇಗೆ ಮೌಲ್ಯಮಾಪನ ಮಾಡಲಾಗುತ್ತದೆ?**
ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾಗುವ ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳಿಗೆ ಗ್ರೀನ್ ಸ್ಟಿಕ್ಕರ್‌ನ್ನು ಅಂಟಿಸಲಾಗಿರುತ್ತದೆ. ಇಂತಹ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ಹೇಗೆ ಮೌಲ್ಯಮಾಪನ ಮಾಡಬೇಕೆಂದು ಶಿಕ್ಷಕರಿಗೆ ಪ್ರತ್ಯೇಕ ಸೂಚನೆಗಳನ್ನು ನೀಡಲಾಗಿದೆ. ಈ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳಲ್ಲಿರುವ ವ್ಯಾಕರಣ ದೋಷ, ಕಾಗುಣಿತ ದೋಷದ ಅಂಶಗಳನ್ನು ಪರಿಗಣಿಸದೇ ಮೌಲ್ಯಮಾಪನ ಮಾಡಲಾಗುವುದು. ಈ ವಿದ್ಯಾರ್ಥಿಗಳಿಗೆ ಇರುವಂತಹ ಭಾಷಾ ವಿನಾಯಿತಿ, ಹೆಚ್ಚುವರಿ ಸಮಯ, ಪರ್ಯಾಯ ವಿಷಯಗಳ ಆಯ್ಕೆ ಮತ್ತು ಸಹಾಯಕರ ನೇಮಕದ ಸೌಲಭ್ಯಗಳನ್ನು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಸದುಪಯೋಗಪಡಿಸಿಕೊಳ್ಳಬಹುದು.

♠♠♠♠♠